# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1081(1159) |
| 2 | ಸದಸ್ಯರ ಹೆಸರು | : | ಶ್ರೀಮತಿ ಎಸ್. ವೀಣಾ ಅಚ್ಚಯ್ಯ (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | : | 17.03.2020 |
| 4 | ಉತ್ತರಿಸುವ ಸಚಿವರು | : | ಸಹಕಾರ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕೊಡಗು ಜಿಲ್ಲೆಯಲ್ಲಿ ಸತತ ಎರಡು ವರ್ಷ ಸಂಭವಿಸಿದ ಪ್ರಾಕೃತಿಕ ವಿಕೋಪದಿಂದಾಗಿ ಸಂಕಷ್ಟದಲ್ಲಿರುವ ಸಹಕಾರ ರೈತರಿಗೆ ಇಲಾಖೆಯಿಂದ ದೊರೆತ್ತಿರುವ ವಿಶೇಷ ನೆರವು ಹಾಗೂ ಆರ್ಥಿಕ ಸೌಲಭ್ಯಗಳೇನು?</td><td>ಕೊಡಗು ಜಿಲ್ಲೆಯ ಸಹಕಾರಿ ಸಂಘಗಳಲ್ಲಿ ರೈತ ಸದಸ್ಯರಿಗೆ 3.00 ಲಕ್ಷದವರೆಗಿನ ಬೆಳೆ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ ಮತ್ತು ರೂ.10 ಲಕ್ಷದವರೆಗಿನ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಗಳನ್ನು ಶೇ.3ರ ಬಡ್ಡಿ ದರದಲ್ಲಿ ವಿತರಿಸಲಾಗುತ್ತಿದೆ ಹಾಗೂ ಸಹಕಾರ ಸಂಘಗಳಲ್ಲಿ ರೈತರು ದಿ:10.07.2018ಕ್ಕೆ ಹೊಂದಿದ ಬೆಳೆ ಸಾಲದ ಪೈಕಿ ರೂ.1.00 ಲಕ್ಷದವರೆಗಿನ ಸಾಲಮನ್ನಾ, ದಿ:31.01.2020ಕ್ಕೆ ಸುಸ್ತಿಯಾಗಿರುವ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲಗಳ ಬಡ್ಡಿ ಮನ್ನಾ ಯೋಜನೆಗಳನ್ನು ಒಂದು ಬಾರಿಗೆ ನೀಡಲಾಗಿದೆ.<br><br>ಯೋಜನೆಗಳ ಸೌಲಭ್ಯ ಪಡೆದ ರೈತರ ವಿವರ ಈ ಕೆಳಗಿನಂತಿದೆ.<br>
<table>
<tr><th>ಯೋಜನೆ</th><th>ರೈತರ ಸಂಖ್ಯೆ</th><th>ಮೊತ್ತ (ಕೋಟಿಗಳಲ್ಲಿ)</th></tr>
<tr><td>ಸಾಲಮನ್ನಾ</td><td>25557</td><td>197.50</td></tr>
<tr><td>ಶೂನ್ಯ ಬಡ್ಡಿ ದರದಲ್ಲಿ ಬೆಳೆಸಾಲ ವಿತರಣೆ</td><td>35479</td><td>541.54</td></tr>
<tr><td>ಶೇ.3ರ ಬಡ್ಡಿ ದರದಲ್ಲಿ ಮಧ್ಯಮಾವಧಿ ಹಾಗೂ ದೀರ್ಘಾವಧಿ ಕೃಷಿ ಸಾಲ ವಿತರಣೆ</td><td>1412</td><td>32.81</td></tr>
</table>
</td></tr>
<tr><td>ಆ</td><td>ಪ್ರಾಕೃತಿಕ ವಿಕೋಪದಿಂದಾಗಿ ಜಿಲ್ಲೆಯಲ್ಲಿ ಆರ್ಥಿಕವಾಗಿ ಮುಗ್ಗಟ್ಟು ಎದುರಿಸುತ್ತಿರುವ ಸಹಕಾರಿ ಸಂಸ್ಥೆಗಳಿಗೆ ಪುನಶ್ಚೇತನಕ್ಕಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?</td><td>ಪ್ರಾಕೃತಿಕ ವಿಕೋಪ ಎದುರಿಸುತ್ತಿರುವ ರೈತರ ಬೆಳೆ ಸಾಲವನ್ನು ಮಧ್ಯಮಾವಧಿ ಸಾಲವಾಗಿ ಮತ್ತು ಮಧ್ಯಮಾವಧಿ ಕೃಷಿ ಸಾಲದ ಕಂತುಗಳನ್ನು ಮರು ನಿಗದಿಪಡಿಸಲು ಸಹಕಾರ ಸಂಘ ಮತ್ತು ಬ್ಯಾಂಕುಗಳಿಗೆ ಸೂಚಿಸಲಾಗಿದೆ.</td></tr>
<tr><td>ಇ</td><td>ಜಿಲ್ಲೆಯಲ್ಲಿನ ಸಹಕಾರ ಸಂಸ್ಥೆಗಳಿಗೆ ವಿಶೇಷ ಆರ್ಥಿಕ ನೆರವು ನೀಡಿ ಆ ಮೂಲಕ ರೈತ ಸಹಕಾರಿಗಳ ನೆರವಿಗೆ ಸರ್ಕಾರ ಮುಂದಾಗುವುದೇ?</td><td>ಮೇಲಿನಂತೆ ರೈತರಿಗೆ ನೆರವು ನೀಡಲಾಗಿದೆ.</td></tr>
</table>

ಸಂಖ್ಯೆ : ಸಇ 54 ರರವಿ 2020

(ಎಸ್.ಟಿ.ಸೋಮಶೇಖರ್)
ಸಹಕಾರ ಸಚಿವರು